ಅನುದಾನಕ್ಕೆ ಪ್ರಯತ್ನಿಸುತ್ತೇನೆ' ಎಂದರು.

ಇದೂ ಹೀಗಾಯಿತಲ್ಲ ಎಂದು ಛಲಬಿಡದ ಐನಾತಿ, ಪಾಪುಲರ್ ಪೋಷಕ ನಟನೊಬ್ಬನಿಗೆ ಟವಲ್ ಹಾಕಿದನು. ಈ ಪೋಷಕನಟನಾದರೂ ಬಹುಬೇಡಿಕೆಯ ಕಲಾವಿದ. ಸಾಹಿತ್ಯ, ಕಲೆ, ಅದು ಇದು ಎಂದು ನಂಟು ಬೆಳೆಸಿಕೊಂಡಿರುವ ಈ ಕಲಾವಿದ ಅತ್ಯಂತ ಬ್ಯುಸಿಯೆಸ್ಟ್ ಪೋಷಕ ನಟ ಎಂಬ ಕೀರ್ತಿಗೂ ಪಾತ್ರನಾಗಿದ್ದ. ಈತನು ಮುಖ್ಯ ಭೂಮಿಕೆಯಲ್ಲಿ ನಟಿಸಿದ್ದ ಪೌರ ಕಾರ್ಮಿಕರ ಬದುಕು ಬವಣೆಯನ್ನೇ ಆಧರಿಸಿದ್ದ ಚಲನಚಿತ್ರವೊಂದು ಆ ವರ್ಷದ ಮಟ್ಟಿಗೆ ಅತ್ಯುತ್ತಮ ಚಿತ್ರವೆಂದು, ಈತ ಅತ್ಯುತ್ತಮ ನಟ ಎಂದು ರಾಜ್ಯ ಪ್ರಶಸ್ತಿಗೆ ಬಾಜನನಾಗಿದ್ದ. ಆತನ ಆ ಸಿನಿಮಾ ವಸ್ತುವಿನ ಆಯ್ಕೆಯನ್ನೆ ಬಂಡವಾಳವಾಗಿಟ್ಟುಕೊಂಡು ಪರಿಚಿತ ಇನ್ನೊಬ್ಬನ ಮುಖಾಂತರ ಕಸ ಗುಡಿಸುವವರ ಶಾಲಾ ವಾರ್ಷಿಕೋತ್ಸವಕ್ಕೆ ಆಹ್ವಾನಿಸಲಾಯಿತು. ಅತ್ಯುತ್ಸಾಹದಿಂದ ಎಲ್ಲವನ್ನೂ ಕೇಳಿಕೊಂಡ ಕಲಾವಿದ ನನಗೆ ತುಂಬಾ ಮನಸ್ಸಿದೆ, ನನ್ನ ಶ್ಯೂಟಿಂಗ್ ಶೆಡ್ಯೂಲ್ ನೋಡಿಕೊಂಡು ಖಚಿತ ಪಡಿಸುತ್ತೇನೆ ಅಂದರು. ಈ ಮಧ್ಯೆ ಹಲವರಿಗೆ ಪ್ರಯತ್ನಿಸಿ ವಿಫಲವಾಗಿದ್ದ ಐನಾತಿ, ಎರಡು ದಿನದ ನಂತರ ಬ್ಯುಸಿಯೆಸ್ಟ್ ಕಲಾವಿದನಿಗೆ ಕರೆ ಮಾಡಿದಾಗ, ಆತ ಬರುವುದಾಗಿ ಗ್ರೀನ್ ಸಿಗ್ನಲ್ ಕೊಟ್ಟ. ಐನಾತಿಯ ಸಂತೋಷಕ್ಕೆ ಪಾರವೇ ಇಲ್ಲದಂತಾಗಿ, ತಕ್ಷಣವೇ ವಸಂತ ಮೇಡಮ್ ಬಳಿ ತೆರಳಿ ಈ ವಿದ್ಯಮಾನವನ್ನು ತಿಳಿಸಿದ. ಮೇಡಮ್‌ಗೆ ಸ್ವರ್ಗವೇ ಸಿಕ್ಕಂತಾಯಿತು. ವಿದ್ಯಾರ್ಥಿಗಳೊಂದಿಗೆ ಖುಷಿಯಿಂದಲೇ ವಿಷಯವನ್ನು ಹಂಚಿಕೊಂಡರು. ಮಕ್ಕಳು ತಾವು ಟಿ.ವಿ. ಸಿನಿಮಾಗಳಲ್ಲಿ ನೋಡಿರುವ ಆ ನಟನನ್ನು ಕಣ್ಣ ಮುಂದೆ ಪ್ರತಿಷ್ಠಾಪಿಸಿಕೊಳ್ಳತೊಡಗಿದವು. ಈ ಕಾರ್ಯಕ್ರಮಕ್ಕೆ ಹೆಚ್ಚಿನ ಪ್ರಚಾರ ಕೊಡೋಣ, ಆಗ ಎಲ್ಲರೂ ಇತ್ತಲೇ ತಿರುಗುತ್ತಾರೆ ಎಂದು ಭಾವಿಸಿ, ಆ ನಟ ಶಾಲೆಗೆ ಬರಲಿರುವ ಸುದ್ದಿಯ ಪೋಸ್ಟರ್‌ಗಳನ್ನು ಬೀದಿ ಬೀದಿಗಳಲ್ಲಿ ಅಂಟಿಸೋಣ ಎಂದು ತೀರ್ಮಾನಿಸಿದರು. ಖಾಕಿಧಾರಿಯಾಗಿ, ಕಸಪೊರಕೆ ಹಿಡಿದಿರುವ ನಟನ ಚಿತ್ರಗಳನ್ನು ಎಲ್ಲೆಡೆಯೂ ಅಂಟಿಸಲಾಯಿತು. ಆತನ ನಟನೆಯ ಒಂದು ಹಾಡಿಗೆ ದಿಢೀರನೆ ನೃತ್ಯ ಸಂಯೋಜಿಸಲಾಯಿತು ಮತ್ತು ಅದೇ ಪ್ರಾರಂಭಿಕ ನೃತ್ಯವಾಗಲಿ ಎಂದೂ ತೀರ್ಮಾನಿಸಲಾಯಿತು. ಯಾವಾಗ ಈ ಕಾರ್ಯಕ್ರಮಕ್ಕೆ ತಾರಾ ರಂಗು ಪ್ರಾಪ್ತವಾಯಿತೊ ಆವಾಗ ಮಕ್ಕಳು, ಪೋಷಕರು, ಹಳೆವಿದ್ಯಾರ್ಥಿಗಳು ಎಲ್ಲರೂ ತೊಡಗಿ ಖುಷಿ ಖುಷಿಯಾಗಿ ಕೆಲಸಮಾಡತೊಡಗಿದರು. ಸ್ವಯಂ ಸ್ಫೂರ್ತಿಯಿಂದ ಶಾಲೆಗೆ ಬಣ್ಣ ಬಳಿದರು, ತಳಿರು ತೋರಣ ಕಟ್ಟಿದರು, ಯಾರೊ ಒಬ್ಬ ಮುಂದೆ ಬಂದು ತಾನಾಗೆ ಡಯಾಸ್ ಹಾಕಿಸಿದ, ಇನ್ನೊಬ್ಬ ಶ್ಯಾಮಿಯಾನ ಹಾಕಿಸಿದ, ಮತ್ತೊಬ್ಬ ವಿಶೇಷ ಊಟಕ್ಕೆ ಸಹಕಾರಿಯಾದ. ಹೀಗೆ ಮಾದಿರ್ ಶಾಲೆ ಎಲ್ಲಾ ವಿಧದಲ್ಲೂ ಶಾಲೆ ವಾರ್ಷಿಕೋತ್ಸವಕ್ಕೆ ಸಜ್ಜಾಯಿತು.

ನಿಗದಿಯಂತೆ ಸಂಜೆ ಆರರ ಸುಮಾರಿಗೆ ವೇದಿಕೆ ಕಾರ್ಯಕ್ರಮ ಶುರುವಾಗಬೇಕಿತ್ತು. ಹೊಸ ಬಟ್ಟೆ ತೊಟ್ಟ ಮಕ್ಕಳು, ತಮ್ಮ ತಂದೆ ತಾಯಿ ಜೊತೆಗೆ ದೂರದ ಊರಿನಿಂದ ಅಜ್ಜಿ ತಾತ ನೆಂಟರಿಷ್ಟರನ್ನೂ ತಮ್ಮ ಡ್ಯಾನ್ಸ್ ನೋಡಲು ಕರೆಸಿಕೊಂಡಿದ್ದರು. ಅಪರೂಪಕ್ಕೆ ಗಡ್ಡನಾದಿಯಾಗಿ ಎಲ್ಲ ಪೌರಕಾರ್ಮಿಕರು ತಮ್ಮ ಖಾಕಿಯನ್ನ ಕಳಚಿಟ್ಟು ಇದ್ದುದರಲ್ಲೇ ಹೊಸವೆನ್ನುವ ಬಟ್ಟೆ ತೊಟ್ಟಿದ್ದರು. ಸದಾ ಕುಡಿದೇ ಇರುತ್ತಿದ್ದ ಗಡ್ಡ ಆ ದಿನದ ಮಟ್ಟಿಗೆ, ಪ್ರೋಗ್ರಾಂ ಮುಗಿದ ನಂತರ ಕುಡಿಯೋಣವೆಂದು ಚೆಡ್ಡಿ ಜೋಬಿಗೆ ಪ್ಯಾಕೆಟ್ ಇಟ್ಟುಕೊಂಡಿದ್ದ. ಹಟ್ಟಿ ತುಂಬ ಜನ ಕಿಕ್ಕಿರಿದಿದ್ದಾರೆ. ಮೈಕ್‌ನಲ್ಲಿ ಅದೇ ಕಲಾವಿದನ ಹಾಡುಗಳು ನಿಂತಲ್ಲೂ ಕುಂತಲ್ಲು ಕೈಕಾಲು ಕುಣಿಸುವಂತೆ ಮಾಡುತ್ತಿವೆ. ಇಷ್ಟೆಲ್ಲ ಆದರೂ ಈ ಐನಾತಿಯ ಪತ್ತೆ ಇಲ್ಲ. ಕರೆ ಮಾಡಿ 'ನೀವು ಎಲ್ಲಿದಿರ, ಆರ್ಟಿಸ್ಟ್ ಬಂದ್ರ?' ಎಂದು ಕೇಳಿದರು ವಸಂತ ಮೇಡಮ್. ಅದಾಗತಾನೆ ನಟನ ಮೇನೇಜರ್‌ನಿಂದ ಕರೆ ಸ್ವೀಕರಿಸಿದ್ದ ಐನಾತಿ 'ಸಾಹೇಬ್ರಿಗೆ ಅರ್ಜೆಂಟ್ ಶೂಟಿಂಗ್ ಕರೆ ಬಂತು, ಸೊ ಅವ್ರು ಬರ್ತಿಲ್ಲ' ಎಂದು ಫೋನ್ ಇಟ್ಟಿದ್ದನು. ಐನಾತಿ ಮೇಡಮ್ ಕಿವಿಯಲ್ಲಿ ಮೆಲ್ಲಗೆ ಈ ವಿಷಯ ತಿಳಿಸಿದನಾದರೂ ಅದು ಹೇಗೊ ಗಡ್ಡನಿಗೆ ತಲುಪಿ ಜೋರಾಗಿ 'ಇವ್ರ ಸಾಕ್ತೋಲ್ನಾಕ್ಯಾಯ, ನಾನು ಬಡ್ಕಂಡೆ ಈ ಮಿಂಡ್ರಿಗುಟ್ದರ ಸವಾಸ ಬ್ಯಾಡ ಅಂತ, ಈಗ ಕಿತ್ಕಳ್ರಪ್ಪ ಅವ್ನವ ಚನಾಗೆ, ಕಿತ್ತು ಏರಿಸ್ಕಳ್ರಿ' ಅಂತ ಬೈಯುತ್ತ ಚಡ್ಡಿ ಜೋಬಲ್ಲಿದ್ದ ಪ್ಯಾಕೆಟ್ ಅನ್ನು ಎಳೆದುಕೊಳ್ಳತೊಡಗಿದ.

●